# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಯವರ ನ್ಯಾಯಾಲಯ, ಟಿ.ನರಸೀಪುರ

**ಸಿಸಿ ನಂಃ 584/2023 ಸಿಡಬ್ಲ್ಯೂ- 4 ಪಿಡಬ್ಲ್ಯೂ-4**

| | | |
|---|---|---|
| ಸಾಕ್ಷಿದಾರರ ಹೆಸರು | : | ಪರಶಿವಮೂರ್ತಿ |
| ತಂದೆಯ ಹೆಸರು | : | ಮರಿಸಿದ್ದಯ್ಯ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಅಬಕಾರಿ ಉಪನಿರೀಕ್ಷಕರು, ನಂಜನಗೂಡು ವಲಯ |
| ವಾಸಸ್ಥಳ | : | ಟಿ.ನರಸೀಪುರ |

**ಸಾಕ್ಷಿಗೆ ದಿಃ 11.12.2025 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು ದಿ.11.08.2014 ರಿಂದ ದಿ.21.11.2025 ರವರೆಗೆ ಅಬಕಾರಿ ಪೇದೆ ಮತ್ತು ಮುಖ್ಯ ಪೇದೆಯಾಗಿ ಟಿ.ನರಸೀಪುರದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. .

ದಿಃ 14.03.2021 ರಂದು ಬೆಳಿಗ್ಗೆ 09.00 ಗಂಟೆಯಿಂದ ಇಲಾಖಾ ವಾಹನದಲ್ಲಿ ಸಿಬ್ಬಂದಿಗಳಾ ಚಾ,ಸಾ. 3 ಮತ್ತು 5 ಮತ್ತು 7 ರವರೊಂದಿಗೆ ಟಿ.ನರಸೀಪುರ , ಕೊಳ್ಳೆಗಾಲ ಮುಖ್ಯ ರಸ್ತೆಯ ವಾಟಾಲು ಗ್ರಾಮಕ್ಕೆ ಹೋಗುವ ಕೂಡು ರಸ್ತೆಯಲ್ಲಿ ರಸ್ತೆಗಾವಲು ನಡೆಸುತ್ತಿರುವಾಗ ಬೆಳಿಗ್ಗೆ 09.20 ರ ಸಮಯದಲ್ಲಿ ಬರುತ್ತಿದ್ದ ಒಂದು ಬಿಳಿ ಬಣ್ಣದ ಮಹೀಂದ್ರ ಮ್ಯಾಕ್ಸಿಮೋ ವಾಹನವನ್ನು ತಡೆದು ನಿಲ್ಲಿಸಿ ನೋಡಿದಾಗ , ಸದರಿ ವಾಹನದಲ್ಲಿ ಇದ್ದ ವಾಹನದ ಚಾಲಕ ನಮ್ಮನ್ನು ನೋಡಿ ಗಾಬರಿಗೊಂಡಂತೆ ಕಂಡನು. ಸದರಿ ವಾಹನವನ್ನು ಪರಿಶೀಲನೆ ಮಾಡಿದಾಗ ವಾಹನದ ಸಂಖ್ಯೆಕೆ ಎ 45-ಎಂ-2426 ಬಿಳಿ ಬಣ್ಣದ ಮಹೀಂದ್ರ ಮ್ಯಾಕ್ಸಿಮೋ ವಾಹನವಾಗಿದ್ದು , ವಾಹನದ ಸೀಟು ಬಳಿ ಮೂರು ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂದಿರುತ್ತದೆ.

ಆರೋಪಿ ಹೆಸರು ಮತ್ತು ವಿಳಾಸ ಕೇಳಲಾಗಿ ಮನು, ಬಿನ್ ಮಹದೇವಯ್ಯ , ಯಾಕನೂರು ಗ್ರಾಮ ಎಂದು ತಿಳಿಸಿರುತ್ತಾರೆ. ಆರೋಪಿಯನ್ನು ಸದರಿ ಮಧ್ಯವನ್ನು ಹೊಂದಲು

ಮತ್ತು ಸಾಗಾಣಿಕೆ ಮಾಡಲು ಪರವಾನಗೆ ಇದೆಯೇ ಎಂದು ವಿಚಾರಿಸಲಾಗಿ, ಆತ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

ಸದರಿ ರಟ್ಟಿನ ಬಾಕ್ಸ್ ಗಳನ್ನು ಶೋದನೆ ಮಾಡಲು ಸ್ಥಳದಲ್ಲಿ ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳಾದ ಚಾ,ಸಾ.1 ಮತ್ತು 2 ರವರಿಗೆ ಪಂಚರಾಗಲು ನೋಟೀಸನ್ನು ನೀಡಿ ಅವರ ಒಪ್ಪಿಗೆಯನ್ನು ಪಡೆದು ಶೋದನಾ ಸಮುಚಿತ ಆಧಾರವನ್ನು ನ್ಯಾಯಾಲಯದಿಂದ ಪಡೆಯಲು ಸಮಯಾವಕಾಶ ಇಲ್ಲದೇ ಇರುವುದರಿಂದ ನಾವುಗಳೇ ಶೋದನಾ ವಾರೆಂಟ್ ನ್ನು ಸ್ಥಳದಲ್ಲೇ ತಯಾರಿಸಿ ರಟ್ಟಿನ ಬಾಕ್ಸ್ ಗಳನ್ನು ತೆಗೆದು ನೋಡಿದಾಗ ಎರಡು ರಟ್ಟಿನ ಬಾಕ್ಸ್ ಗಳ ಮೇಲೆ ರಾಯಲ್ ಚಾಲೆಂಜ್ ಸ್ಟ್ರಾಂಗ ಬಿಯರ್ 650 ಮಿಲಿಯ 24 ಬಾಟಲುಗಳು ಕಂಡು ಬಂದಿರುತ್ತದೆ. ಮತ್ತೊಂದು ರಟ್ಟಿನ ಪೆಟ್ಟಿಗೆಯಲ್ಲಿ 500 ಮಿಲಿಯ 24 ಪವರ್ ಫುಲ್ ಸ್ಟ್ರಾಂಗ್ ಬಿಯರ್ ಕ್ಯಾನ್ ಗಳು ಕಂಡು ಬಂದಿರುತ್ತದೆ. ನಂತರ ದೊರೆತ ಬಿಯರ್ ನಲ್ಲಿ ಒಂದು ರಟ್ಟಿನ ಬಾಕ್ಸ್ ನಲ್ಲಿದ್ದ 650 ಮಿಲಿಯ 12 ರಾಯಲ್ ಚಾಲೆಂಚ್ ಸ್ಟ್ರಾಂಗ್ ಬಿಯರ್ ಗಳು ಹಾಗೂ ಮತ್ತೊಂದು ಪಟ್ಟಿಗೆಯ 500 ಮಿಲಿಯ ಪವರ್ ಫುಲ್ ಸ್ಟ್ರಾಂಗ್ ಬಿಯರ್ ಕ್ಯಾನ್ ಗಳನ್ನು ದೊರೆತ ಪೆಟ್ಟಿಗೆಯಲ್ಲಿ ಹಾಕಿ ರಾಸಾಯನಿಕ ಪರೀಕ್ಷಗಾಗಿ ಮಾದರಿಯನ್ನು ತೆಗೆದು ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ , ಇಲಾಖಾ ಸೀಲು 278 ಎಂದು ಸೀಲು ಮಾಡಿ , ಮಾದರಿ ಚೀಟಿಗಳನ್ನು ಅಂಟಿಸಿರುತ್ತೇವೆ. ನಂತರ ಪಂಚನಾಮೆಯನ್ನು ಬೆಳಿಗ್ಗೆ 09.30 ರಿಂದ ಬೆಳಿಗ್ಗೆ 11.00 ಗಂಟೆಯವರಗೆ ಪಂಚನಾಮೆಯನ್ನು ಜರುಗಿಸಿ ದೊರೆತ ಮಧ್ಯವನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ನಂತರ ಠಾಣೆಗೆ ಹೋಗಿ ಆರೋಪಿಗಳ ವಿರುದ್ಧ ಮೊಕದ್ದಮೆ ಯನ್ನು ಚಾಸಾ.7 ರವರು ದಾಖಲು ಮಾಡಿರುತ್ತಾರೆ. ನಂತರ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಈ ಸಂಬಂಧ ನಾನು ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ದಿ.28.03.2023 ರಂದು ಮುದ್ದೆ ಮಾಲುಗಳನ್ನು ಎಫ್.ಎಸ್.ಎಲ್ ಗೆ ನೀಡಿ, ನಂತರ ಅದರ ವರದಿಯನ್ನು ಪಡೆದು ಕಛೇರಿಗೆ ಹಾಜರಾಗಿ ಹಾಜರುಪಡಿಸಿರುತ್ತೇನೆ ಮತ್ತು ಈ ಸಂಬಂಧ ಹೇಳಿಕೆ ನೀಡಿರುತ್ತೇನೆ. ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ.

ನಿಪಿ.1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1(ಡಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ .ಎಂ.ಎಸ್.ಎನ್.   ವಕೀಲರಿಂದಃ</u>**

ಘಟನಾ ಸ್ಥಳದಲ್ಲಿ ಯಾವುದೇ ಘಟನೆ ನಡೆದಿರುವುದಿಲ್ಲ ಹಹಾಗೂ ನಾನು ಮಹಜರ್ ಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಗೆ ಇಬ್ಬರು ಪಂಚರು, 3 ಜನ ಸಿಬ್ಬಂದಿಗಳು, ಒಬ್ಬರು ಅಧಿಕಾರಿ ಸಹಿ ಮಾಡಿರುತ್ತೇವೆ. ಮುದ್ದೆ ಮಾಲುಗಳನ್ನು ಠಾಣೆಯಲ್ಲೇ ಸೃಷ್ಟಿ ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೇ ಮಾಲುಗಳ ಮೇಲೆ ಇದ್ದ ಬ್ಯಾಚ್ ನಂಬರ್, ಅದರ ತಯಾರಿಕ ದಿನಾಂಕಗಳನ್ನು ಹೇಳಲು ನನಗೆ ಬರುವುದಿಲ್ಲ. ರಾಸಾಯನಿಕ ಪರೀಕ್ಷೆಗಾಗಿ ಚಾಸಾ.7 ರವರ ಆದೇಶದಂತೆ ಮುದ್ದೆ ಮಾಲುಗಳನ್ನು ತೆಗೆದುಕೊಂಡು ಹೋಗಿರುತ್ತೇನೆ. ಘಟನಾ ಸ್ಥಳದಲ್ಲಿ ಮಹಜರ್ ಸಮಯದಲ್ಲಿ ಫೋಟೋ ತೆಗೆದಿರುತ್ತೇವೆ. ವೀಡಿಯೋ ಚಿತ್ರೀಕರಣ ಮಾಡಿರುವುದಿಲ್ಲ. ಭಾವಚಿತ್ರಗಳನ್ನು ಈ ಪ್ರಕರದಲ್ಲಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>**

**<u>(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)</u>**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**